**ಸಾಕ್ಷಿಗೆ ದಿನಾಂಕಃ 27.05.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀಮತಿ ಕೆ.ಟಿ.ಎಸ್. ವಕೀಲರಿಂದಃ**

ಅರ್ಜಿದಾರರು ನನಗೆ ಹೆಂಡತಿ ಮತ್ತು ಅಕ್ಕನ ಮಗಳಾಗಬೇಕು. ನಮಗೆ ಇಬ್ಬರು ಮಕ್ಕಳು ಅವರೆಂದರೆ ಮದನ್ ಕುಮಾರ್ ಮತ್ತು ರಾಜೇಶ್ವರಿ. ನಾನು ತೋಟಗಾರಿಕೆಯ ಇಲಾಖೆಯಲ್ಲಿ ಕೆ.ಆರ್.ಎಸ್. ನಲ್ಲಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ. ಮದುವೆ ಆದ ಮೇಲೆ ಅರ್ಜಿದಾರರನ್ನು ವಸತಿಗೃಹದಲ್ಲಿ ಇರಿಸಿಕೊಂಡಿದ್ದೆನು ಎಂದರೆ ಸರಿ. ಮದುವೆ ಆದ ಮೇಲೆ 5-6 ವರ್ಷಗಳ ಕಾಲ ಅನ್ಯೋನ್ಯವಾಗಿದ್ದೆವು ಎಂದರೆ ಸರಿಯಲ್ಲ. ಅರ್ಜಿದಾರರನ್ನು ಇಷ್ಟ ಇಲ್ಲದೆ ಇದ್ದರೂ ಮದುವೆ ಆಗಿರುತ್ತೇನೆ. ನನಗೆ ಮೊದಲಿನಿಂದಲೂ ವಿಪರೀತ ಕೋಪ ಎಂದರೆ ಸರಿಯಲ್ಲ. ಅರ್ಜಿದಾರರನ್ನು ಮದುವೆ ಆಗಲು ಇಷ್ಟ ಇಲ್ಲದ ಕಾರಣ ಸಣ್ಣ ಪುಟ್ಟ ಕಾರಣಗಳಿಗೂ ನಾನು ಅರ್ಜಿದಾರರನ್ನು ಬೈದ್ದು ಹೊಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೆಂಡತಿ ಮತ್ತು ಮಕ್ಕಳಿಗೆ ಊಟ ಮತ್ತು ಬಟ್ಟೆಯನ್ನು ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ಸಂಬಂಧ ಹಲವಾರು ಬಾರಿ ಪಂಚಾಯಿತಿ ನಡೆದಿರುತ್ತದೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ನಾನು ಹೆಂಡತಿ ಮತ್ತು ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿದರೂ ತದನಂತರ ಅವರನ್ನು ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ವಸತಿಗೃಹದಲ್ಲಿ ಇದ್ದಾಗ ನಾನು ಬಾಡಿಗೆ ಕಟ್ಟುತ್ತಿರಲಿಲ್ಲ ಎಂದರೆ ಸಾಕ್ಷಿಯು ನನ್ನ ಸಂಬಳದಲ್ಲಿ ಹಿಡಿಯುತ್ತಿದ್ದರು ಎಂದು ನುಡಿದಿರುತ್ತಾರೆ. ನಾನು ಅರ್ಜಿದಾರರಿಗೆ ತಿಳಿಸದೆ ಮಂಡ್ಯ ಜಿಲ್ಲೆಯ ಹಿರಿಯ ಸಹಾಯಕ ನಿರ್ದೇಶಕರ ಕಛೇರಿಗೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವರ್ಗಾವಣೆ ಆದ ಮೇಲೆ ಅರ್ಜಿದಾರರು ಮೈಸೂರಿನ ವಸತಿಗೃಹದಲ್ಲಿ ವಾಸವಿದ್ದು, ಆದರೆ ನಾನು ಬಾಡಿಗೆ ಕಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವರ್ಗಾವಣೆಯಾದ ವಿಚಾರ ತಿಳಿದ ಮೇಲೆ ಅರ್ಜಿದಾರರು ನಿರ್ದೇಶಕರ ಕಛೇರಿಗೆ ಬಂದಿರುತ್ತಾರೆ ಎಂದರೆ ಸರಿ. ನಿರ್ದೇಶಕರು ನನಗೆ ಜೀವನಾಂಶದ ರೂಪದಲ್ಲಿ ಪ್ರತಿ ತಿಂಗಳು ರೂ.2000/-ಗಳನ್ನು ನೀಡುವಂತೆ ಹೇಳಿದ್ದರು ಎಂದರೆ ಸರಿ. ಪ್ರತಿ ತಿಂಗಳು ಅದರಂತೆ ಅರ್ಜಿದಾರರ ಖಾತೆಗೆ ರೂ.2000/- ಜಮಾ ಆಗುತ್ತಿತ್ತು ಎಂದರೆ ಸರಿ. ಸದರಿ ಹಣದಿಂದ ಅರ್ಜಿದಾರರು ಜೀವನ ನಡೆಸಲು ಮತ್ತು ಬಾಡಿಗೆ ಕಟ್ಟಲು ಆಗದ ಕಾರಣ ಅವರನ್ನು ವಸತಿ ಗೃಹದಿಂದ ಖಾಲಿ ಮಾಡಿಸಿರುತ್ತಾರೆ ಎಂದರೆ ಸರಿ. ನಂತರ ಅರ್ಜಿದಾರರು ಮಂಡ್ಯ ಜಿಲ್ಲೆಗೆ ನಾನು ವಾಸವಾಗಿರುವ ಮನೆಗೆ ಬಂದಾಗ ಅವರನ್ನು ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಂತರ ಅರ್ಜಿದಾರರು ತನ್ನ ತವರುಮನೆಗೆ ಹೋಗಿ ವಾಸಿಸಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ನಾನು ರೂ.2000/-ಗಳನ್ನು ಅರ್ಜಿದಾರರಿಗೆ ಕೊಡಲು ನಿಲ್ಲಿಸಿರುತ್ತೇನೆ ಎಂದರೆ

ಸರಿಯಲ್ಲ. ಅರ್ಜಿದಾರರು ನಿರ್ದೇಶಕರನ್ನು ಭೇಟಿ ಮಾಡಿದಾಗ ಅವರು ನನ್ನನ್ನು ಕರೆಯಿಸಿ ಜೀವನಾಂಶ ನೀಡುವಂತೆ ಹೇಳಿದ್ದರು, ಅದನ್ನು ನಾನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರನ್ನು ನಾನು ಮಂಡ್ಯ ಬಸ್ ನಿಲ್ದಾಣದಲ್ಲಿ ಹೊಡೆದಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಪ್ರತಿ ತಿಂಗಳು ರೂ.3000/-ಗಳನ್ನು ಪಾವತಿ ಮಾಡುವಂತೆ ಆದೇಶ ವಿದ್ದರೂ ಸುಮಾರು ಎರಡೂವರೆ ವರ್ಷಗಳ ಕಾಲ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮಗಳ ಮದುವೆಗೆ ಆರರಿಂದ ಏಳು ಲಕ್ಷ ಖರ್ಚು ಆಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರು ಸಾಲ ಮಾಡಿ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಗಳಿಗೆ ಇಬ್ಬರು ಮಕ್ಕಳಿರುತ್ತಾರೆ ಎಂದರೆ ಸರಿ. ಅವರ ಬಾಣಂತನಕ್ಕೆ ಒಂದು ಲಕ್ಷ ರೂ.ಗಳನ್ನು ಸಾಲ ಮಾಡಿರುತ್ತಾರ ಎಂದರೆ ಸರಿಯಲ್ಲ.

ನಾನು ನಿವೃತ್ತಿ ಹೊಂದುವಾಗ ಸುಮಾರು 30-35 ಲಕ್ಷ ಬಂದಿರುತ್ತದೆ ಎಂದರೆ ಸರಿಯಲ್ಲ. ನನಗೆ ಪ್ರತಿ ತಿಂಗಳು 25-30 ಸಾವಿರ ಪಿಂಚಣಿ ಬರುತ್ತದೆ ಎಂದರೆ ಸಾಕ್ಷಿಯು ರೂ.18,000/- ಬರುತ್ತದೆ ಎಂದು ನುಡಿದಿರುತ್ತಾರೆ. ಈ ಸಂಬಂಧ ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಭಾಗಕ್ಕೆ ಬಂದ 2 ಎಕರೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ತಡಿಮಾಲಂಗಿ ಗ್ರಾಮದಲ್ಲಿ ನನ್ನ ಭಾಗಕ್ಕೆ ಬಂದ ಮನೆ ಇರುತ್ತದೆ ಎಂದರೆ ಸಾಕ್ಷಿಯು ಮನೆ ಬಿದ್ದುಹೋಗಿರುತ್ತದೆ ಎಂದು ನುಡಿದಿರುತ್ತಾರೆ. ಅರ್ಜಿದಾರರಿಗೆ ಆರೋಗ್ಯ ಸಮಸ್ಯೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರಿಗೆ ಪ್ರತಿ ತಿಂಗಳು ಚಿಕಿತ್ಸೆಗಾಗಿ 5000/- ರೂ.ಗಳ ಖರ್ಚು ಆಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರು ಈಗ ಬಾಡಿಗೆ ಮನೆಯಲ್ಲಿ ಮೈಸೂರಿನಲ್ಲಿ ವಾಸ ಮಾಡುತ್ತಿದ್ದು, ರೂ.5000/-ಗಳನ್ನು ಬಾಡಿಗೆ ಮನೆಗೆ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಗರ್ಭಕೋಶದ ಆಪರೇಷನ್ ಗಾಗಿ ಒಂದು ಲಕ್ಷದ ಅವಶ್ಯಕತೆ ಇದ್ದು, ಹಣ ಇಲ್ಲದ ಕಾರಣ ಆಪರೇಷನ್ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಿಚ್ಛೇದನಾ ಅರ್ಜಿಯನ್ನು ಸಲ್ಲಿಸಿದಾಗ ಅರ್ಜಿದಾರರು ನ್ಯಾಯಾಲಯಕ್ಕೆ ಹಾಜರು ಆಗಿರುವುದಿಲ್ಲ. ಅರ್ಜಿದಾರರ ಗಮನಕ್ಕೆ ಬಾರದ ಹಾಗೆ ಏಕಪಕ್ಷೀಯವಾಗಿ ವಿಚ್ಛೇದನಾ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇರುವುದಿಲ್ಲ.</u>**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**